# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

# BENGALURU NORTH UNIVERSITY

ಟಮಕ, ಕೋಲಾರ – 563103

**ಸಂಖ್ಯೆ: ಬೆಂ.ಉ.ವಿ/ಯು.ಯು.ಸಿ.ಎಂ.ಎಸ್/ಪ.ಪ್ರ/ 454 /2022-23 ದಿನಾಂಕ: 21.06.2022**

**-: ಸುತ್ತೋಲೆ :-**

**ವಿಷಯ: ಯು.ಯು.ಸಿ.ಎಂ.ಎಸ್. ಕಾಲೇಜು ಲಾಗಿನ್ ನಲ್ಲಿ ಬ್ಯಾಂಕ್ ಖಾತೆ, ಪ್ರವೇಶ ಶುಲ್ಕ ಹಾಗೂ ಸೀಟ್ ಅಲೋಕೇಷನ್ ವಿಧಾನಗಳನ್ನು ನಮೂದಿಸುವ ಕುರಿತು.**

**ಉಲ್ಲೇಖ:** 1. 21.06.2022ರಂದು ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಸಮ್ಮುಖದಲ್ಲಿ ನಡೆದ ಸಭೆಯ ತೀರ್ಮಾನ.

2. ಮಾನ್ಯಕುಲಪತಿಗಳ ಅನುಮೋದನೆಯ ದಿನಾಂಕ: 21.06.2022

* * * *

ಈ ಮೂಲಕ ಎಲ್ಲಾ ಪ್ರಾಂಶುಪಾಲರಿಗೆ ತಿಳಿಯಪಡಿಸುವುದೇನೆಂದರೆ, ಈಗಾಗಲೇ ದ್ವಿತೀಯ ಪಿ.ಯು.ಸಿ. ಫಲಿತಾಂಶ ಪ್ರಕಟವಾಗಿದ್ದು, ಬಹುತೇಕ ಕಾಲೇಜುಗಳು ಯು.ಯು.ಸಿ.ಎಂ.ಎಸ್. ವೆಬ್‌ಸೈಟ್ ನಲ್ಲಿ ಕಾಲೇಜಿನ **ಬ್ಯಾಂಕ್ ಖಾತೆಯ ವಿವರ((Bank Details), ಪ್ರವೇಶ ಶುಲ್ಕದ ವಿವರ (Admission Fee Details) ಹಾಗೂ ಸೀಟ್ ಅಲೋಕೇಷನ್ ವಿಧಾನ (Seat Allocation Method)ಗಳನ್ನು ನಮೂದಿಸಿರುವುದಿಲ್ಲ**. ಇದರಿಂದ, 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪದವಿ ಕೋರ್ಸುಗಳಿಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಮೇಲೆ ತಿಳಿಸಿರುವ ವಿಷಯಗಳನ್ನು ಆಧ್ಯತೆಯ ಮೇರೆಗೆ ಪರಿಗಣಿಸಿ ಆಯಾ ಕಾಲೇಜುಗಳ ಯು.ಯು.ಸಿ.ಎಂ.ಎಸ್. ಲಾಗಿನ್‌ನಲ್ಲಿ ತಪ್ಪದೇ ನಮೂದಿಸಬೇಕೆಂದು ತಿಳಿಸಲಾಗಿದೆ, ಇಲ್ಲವಾದಲ್ಲಿ ವಿದ್ಯಾರ್ಥಿಯು ನಿಮ್ಮ ಕಾಲೇಜನ್ನು ಆಯ್ಕೆ ಮಾಡಲು ಸಾಧ್ಯವಾಗುವುದಿಲ್ಲ.

ಅದೇರೀತಿ, ದಿನಾಂಕ: 21.06.2022ರಂದು ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಮ್ಮುಖದಲ್ಲಿ ನಡೆದ ಸಭೆಯ ನಿರ್ಣಯದಂತೆ, ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳು 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪದವಿ ಕೋರ್ಸುಗಳ ಪ್ರವೇಶಾತಿಗೆ ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು 2021-22ನೇ ಶೈಕ್ಷಣಿಕ ಸಾಲಿನಲ್ಲಿ ಹೊರಡಿಸಿರುವ ಶುಲ್ಕದ ಅಧಿಸೂಚನೆಯನ್ನೇ ಪ್ರಸ್ತುತ ವರ್ಷದ ಪದವಿ ಪ್ರವೇಶಾತಿಗೆ ಪಾಲಿಸುವಂತೆ ತಿಳಿಸಿರುತ್ತದೆ. ಆದ್ದರಿಂದ, ಸರ್ಕಾರಿ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರು ಈ ಕುರಿತು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ತಿಳಿಸಿದೆ.

21/6

**ಕುಲಸಚಿವರು**

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಟಮಕ, ಕೋಲಾರ-ಕರ್ನಾಟಕ-563 103.

-2-

Scanned with CamScanner

ಇವರಿಗೆ,

**ಎಲ್ಲಾ ಪ್ರಾಂಶುಪಾಲರಿಗೆ (ಸರ್ಕಾರಿ, ಅನುದಾನಿತ ಮತ್ತು ಖಾಸಗಿ)**
**ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು**
**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ**

ಪ್ರತಿಗಳು:

1. ಆಪ್ತಶಾಖೆ, ಕುಲಪತಿಗಳ ಕಾರ್ಯಾಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
2. ಆಪ್ತಶಾಖೆ, ಕುಲಸಚಿವರು (ಮೌ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
3. ಆಪ್ತಶಾಖೆ, ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ
4. ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ
5. ವೆಬ್ಸೈಟ್ ನಿರ್ವಾಹಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ
6. ಕಛೇರಿ ಪ್ರತಿ.

21/8

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
**ಟಮಕಾ, ಕೋಲಾರ – ಕರ್ನಾಟಕ – 563 103.**

Scanned with CamScanner